MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 6-9-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಮಲೇಶಿಯನ್ ಪಾಮೆಣ್ಣೆ ದಾಸ್ತಾನು ಹೆಚ್ಚಳ ಸಾಧ್ಯತೆ

ಚೀನಾದಿಂದ ದುರ್ಬಲ ಬೇಡಿಕೆ ಹಾಗೂ ಉತ್ಪಾದನೆ ಹೆಚ್ಚಳದಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸ್ವಲ್ಪ ಮಟ್ಟಿನ ಹೆಚ್ಚಳ ಕಂಡಿದ್ದರೂ ಇನ್ನೂ ದರ ಇಳಿಕೆಯಲ್ಲಿಯೇ ಇದೆ. ದಾಸ್ತಾನು ಹೆಚ್ಚಳ ಹಾಗೂ ಉತ್ಪಾದನೆ ಹೆಚ್ಚಳದಿಂದ ಪಾಮೆಣ್ಣೆ ದರ ಇಳೀಕೆಯಾಗುತ್ತಿದೆ.

### ಖಾರೀಫ್ ತೊಗರಿ ಬಿತ್ತನೆ 6 ಶೇಕಡಾ, ಉದ್ದು, ಹೆಸರುಕಾಳು 4 ಶೇಕಡಾ ಇಳಿಕೆ

ಈ ವರ್ಷದ ಖಾರೀಫ್ ಬೆಳೆಯ ತೊಗರಿ ಬಿತ್ತನೆ ಹಿಂದಿನ ವರ್ಷಕ್ಕಿಂತ 6 ಶೇಕಡಾ, ಉದ್ದು, ಹೆಸರುಕಾಳು 4 ಶೇಕಡಾ ಇಳಿಕೆ ಯಾಗಿದೆಯೆನ್ನಲಾಗಿದೆ. ಬೇಳೆಕಾಳು ಆಮದಿಗೆ ಮುಕ್ತವಾಗಿದ್ದು ಬೇಡಿಕೆ ಪೂರೈಕೆಯಲ್ಲಿ ಸಹಾಯಕವಾಗಲಿದೆ. ಮಳೆ ವಿಳಂಬಿತವಾದರೂ ಜುಲೈ, ಆಗಷ್ಟ್ ತಿಂಗಳುಗಳಲ್ಲಿ ಸಕ್ರಿಯವಾಗಿದ್ದುದರಿಂದ ಉತ್ಪಾದನೆ ಉತ್ತಮವಿರುವ ನಿರೀಕ್ಷೆಯಿದೆಯೆನ್ನಲಾಗಿದೆ. ಸರಕಾರ ರೈತರಿಂದ ಹೆಚ್ಚಿನ ಬೇಳೆಕಾಳು ಖರೀದಿಸಲಿದೆಯೆನ್ನಲಾಗಿದೆ. ಆಹಾರ ಭದ್ರತೆಯನ್ವಯ ರೈತರಿಂದ ಬೆಂಬಲ ಬೆಲೆಯಲ್ಲಿ ತೊಗರಿ ಹಿಂದಿನ ವರ್ಷಕ್ಕೆ 40 ಶೇಕಡಾ ಹೆಚ್ಚಳ, ಉದ್ದು ಹಾಗೂ ಮಸೂರ್ 2.5 ಶೇಕಡಾ ಹೆಚ್ಚಳ ಖರೀದಿಸಲಿದೆಯೆನ್ನಲಾಗಿದೆ.

### ಜಾಗತಿಕ ಕಾಳುಮೆಣಸು ಉತ್ಪಾದನೆ ಸ್ವಲ್ಪಮಟ್ಟಿನ ಇಳಿಕೆ ನಿರೀಕ್ಷೆ

ಮುಂದಿನ ಬೆಳೆಯ(2022) ರಲ್ಲಿ ಜಾಗತಿಕ ಕಾಳುಮೆಣಸು ಉತ್ಪಾದನೆ ಸ್ವಲ್ಪಮಟ್ಟಿನ ಇಳಿಕೆಯಾಗಬಹುದಾದರೂ ಹಿಂದಿನ ವರ್ಷದ ಉತ್ಪಾದನೆಯ ಸಮೀಪವಿರುವ ನಿರೀಕ್ಷೆಯಿದೆಯೆನ್ನಲಾಗಿದೆ. ಬೇಡಿಕೆಯೂ ಸ್ಥಿರವಿರುವ ನಿರೀಕ್ಷೆಯಿದ್ದು, ಸ್ವಲ್ಪ ಮಟ್ಟಿನ ಪ್ರಗತಿಯಾಗುವ ನಿರೀಕ್ಷೆಯಿದೆ. ದರ ಉತ್ತಮವಿರುವ ಸಾಧ್ಯತೆಯಿದೆ.

### 2022–23 ರಲ್ಲಿ ಜಾಗತಿಕ ಜೋಳ ಉತ್ಪಾದನೆ ಇಳಿಕೆ

IGC ( International Grains Council ಪ್ರಕಾರ 2022–23 ರಲ್ಲಿ ಜಾಗತಿಕ ಜೋಳ ಉತ್ಪಾದನೆ 41 ಮಿಲಿಯನ್ ಟನ್ ಇಳಿಕಯಾಗಲಿದೆಯೆನ್ನಲಾಗಿದೆ.